ದಿನಾಂಕ 04.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. PSR ವಕೀಲರಿಂದ:**

ನನ್ನ ಮುತ್ತಾತ ನ ಹೆಸರು ದೊಡ್ಡಬಸವೇಗೌಡ ಎಂದರೆ ಸರಿ . ಅವರಿಗೆ ಇಬ್ಬರು ಅಣ್ಣತಮ್ಮಂದಿರು ಎಂದರೆ ಸರಿ . ದೊಡ್ಡಬಸವೇಗೌಡ ರಿಗೆ 3 ಜನ ಮಕ್ಕಳು ಎಂದರೆ ಸರಿ . ಅವರುಗಳೆಂದರೆ ಬಸವೇಗೌಡ ಅಲಿಯಾಸ್ ತೀಟೇಗೌಡ , ಕುನ್ನಸಿದ್ದೇಗೌಡ ಮತ್ತು ತಿಬ್ಬೇಗೌಡ ಎಂದರೆ ಸರಿ . ನೀವು ಖರೀದಿ ಮಾಡಿದ ಸ್ವತ್ತು ಮೂಲ ದೊಡ್ಡಬಸವೇಗೌಡ ರಿಗೆ ಸೇರಿದ ಸ್ವತ್ತು ಎಂದರೆ ಸರಿ .

1958 ರಲ್ಲಿ ನಿಮ್ಮ ತಾತ ಬಸವೇಗೌಡ ಅಲಿಯಾಸ್ ತೀಟೇಗೌಡ ಹಾಗೂ ಅವರ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ ಯ ಗಂಡ ತಿಬ್ಬೇಗೌಡ ಮತ್ತು ನಿಮಗೆ ಸ್ವತ್ತನ್ನು ಮಾರಾಟ ಮಾಡಿರುವ ಕುನ್ನಸಿದ್ದೇಗೌಡ ಹಾಗೂ ನಿಮ್ಮ ತಾತ ಬಸವೇಗೌಡ ಅಲಿಯಾಸ್ ತೀಟೇಗೌಡ ಮೂವರು ಅಣ್ಣತಮ್ಮಂದಿರು ಎಂದರೆ ಸರಿ . ನೀವು ವಿಭಾಗ ಮಾಡಿಕೊಂಡ ಸ್ವತ್ತುಗಳಲ್ಲಿ ಕುರಿಹಟ್ಟಿ , ದೊಡ್ಡಟ್ಟಿ , ತೊಟ್ಟಿಹಟ್ಟಿ ಮನೆಗಳಿದ್ದವು ಎಂದರೆ ಸರಿಯಲ್ಲ, ತೊಟ್ಟಿಹಟ್ಟಿಯಲ್ಲಿ ಒಂದು ಮನೆ ಇತ್ತು ಎಂದು ನುಡಿಯುತ್ತಾರೆ.

ಬಸವೇಗೌಡ ಅಲಿಯಾಸ್ ತೀಟೇಗೌಡ ರ ಮಕ್ಕಳು ಎಲ್ಲರೂ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿ . ನೀವು ಖರೀದಿ ಮಾಡಿದ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡಿರುತ್ತೀರಿ ಎಂದರೆ ಮನೆ ಮೊದಲಿನಿಂದಲೂ ಇದೆ ಎಂದು ನುಡಿಯುತ್ತಾರೆ. ನಿಮ್ಮ ಚಿಕ್ಕಪ್ಪ ಕೆಂಪೇಗೌಡ ಹಾಗೂ ನಿಮ್ಮ ಚಿಕ್ಕಮ್ಮ ದೇವಮ್ಮ

ರವರಿಗೆ ವಿಭಾಗದ ಮೂಲಕ ಖಾಲಿ ನಿವೇಶನ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಮನೆಯ ಹಿಂಭಾಗ ಖಾಲಿ ನಿವೇಶನ ಇದೆ ಎಂದರೆ ಸರಿ . ಪುಟ್ಟಬಸವೇಗೌಡ ಸಹ ಮನೆ ಕಟ್ಟಿಕೊಂಡು ಬೇರೆ ಕಡೆ ವಾಸವಾಗಿದ್ದಾರೆ ಎಂದರೆ ಸರಿ . ದಾವಾ ಸ್ವತ್ತಿನ ಪಶ್ಚಿಮಕ್ಕೆ ಕುರಿಹಟ್ಟಿ ಇದೆ ಎಂದರೆ ಸರಿಯಲ್ಲ, ನಕಾಶೆ ರಸ್ತೆ ಇದೆ ಎಂದು ನುಡಿಯುತ್ತಾರೆ.

1958 ರಲ್ಲಿ ನಿಮ್ಮ ಕುಟುಂಬದಲ್ಲಿ ವಿಭಾಗವಾದಾಗ ವಾದಿಯ ಗಂಡನಿಗೆ ದಾವಾ ಸ್ವತ್ತಿನ ಪಶ್ಚಿಮಕ್ಕಿರುವ ಕುರಿಹಟ್ಟಿ ಎನ್ನುವ ಮನೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಸ್ವಲ್ಪ ಭಾಗ ವಾದಿಯ ಸ್ವತ್ತು ಇದೆ ಎಂದರೆ ಸರಿಯಲ್ಲ. ವಿಭಾಗದಂತೆ ಖಾನೇಷುಮಾರಿ ನಂಬರ್ 313/222 ರಂತೆ ಕಾಳಮ್ಮನ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸರಿಯಲ್ಲ. ಸದರಿ ಖಾತೆಯನ್ನು ಎಲ್ಲೂ ಸಹ ನೀವು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ , ಮಾಡಿರುವುದಾಗಿ ನುಡಿಯುತ್ತಾರೆ. ಎಲ್ಲಿ ಪ್ರಶ್ನೆ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

1958 ರಲ್ಲಿ ವಾದಿಯ ಗಂಡ ತಿಬ್ಬೇಗೌಡ ಮತ್ತು ಅವರ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ ದಾವಾ ಸ್ವತ್ತನ್ನು ನಿಮ್ಮ ಮುತ್ತಾತ ದೊಡ್ಡಬಸವೇಗೌಡ ರ ತಮ್ಮ ಚಿಕ್ಕಪುಟ್ಟೇಗೌಡರಿಂದ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಸ್ವತ್ತು ನಿಮ್ಮ ಮುತ್ತಾತನ ತಮ್ಮ ಚಿಕ್ಕಪುಟ್ಟೇಗೌಡರಿಗೆ ವಿಭಾಗದ ಮೂಲಕ ಬಂದ ಸ್ವತ್ತಾಗಿರುತ್ತದೆ ಎಂದರೆ ಗೊತ್ತಿಲ್ಲ.

ದಾವಾ ಸ್ವತ್ತಿನ ಪಶ್ಚಿಮಕ್ಕಿರುವ ಸ್ವತ್ತು ಸಹ ವಾದಿಯ ಗಂಡನ ಅಣ್ಣತಮ್ಮಂದಿರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯ ಗಂಡ , ತನ್ನ ಭಾಗಕ್ಕೆ ಬಂದಂತಹ ಸ್ವತ್ತನ್ನು ಮಾರಾಟ ಮಾಡಿಲ್ಲ , ಅವರ ಅಣ್ಣ

ತನ್ನ ಭಾಗಕ್ಕೆ ಬಂದ ಸ್ವತ್ತನ್ನು ಮಾತ್ರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ವಾದಿಯ ಗಂಡನ ಹೆಸರಿನಲ್ಲಿ ಸ್ವಲ್ಪ ಸ್ವತ್ತು ಇದ್ದರೂ ಸಹ ನೀವು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ತಿಬ್ಬೇಗೌಡರು ಖರೀದಿ ಮಾಡಿದ್ದು , ಅವರು ತೀರಿಕೊಂಡ ನಂತರ ಅವರ ಹೆಂಡತಿ ಕಾಳಮ್ಮ ಮತ್ತು ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನೀವು ಸ್ವಾ ಧೀನದಲ್ಲಿ ಇರುವ ಬಗ್ಗೆ ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಕ್ಕ ಹೆಂಚಿನ ಮನೆಯ ಚಕ್ಕುಬಂಧಿ ಪೂರ್ವಕ್ಕೆ ಖಾಲಿ ಜಾಗ ಮತ್ತು ವಾದಿಗಳ ಮನೆ ಎಂದರೆ ಸರಿಯಲ್ಲ . ಪಶ್ಚಿಮಕ್ಕೆ ನಿಮ್ಮ ಚಿಕ್ಕಪ್ಪ ದೇಶೀಗೌಡರ ಮನೆ ಎಂದರೆ ಸರಿಯಲ್ಲ, ರಸ್ತೆ ಇದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ದೇವಾಜಮ್ಮ ರವರ ಖಾಲಿ ಜಾಗ ಎಂದರೆ ಸರಿಯಲ್ಲ, ಮನೆ ಇದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ರಸ್ತೆ ಎಂದರೆ ಸರಿ . ಮೇಲೆ ಹೇಳಿದ ಚಕ್ಕುಬಂಧಿಯ ಸ್ವತ್ತು ವಾದಿಯ ಗಂಡನ ಪಿತ್ರಾರ್ಜಿತ ಸ್ವತ್ತಾಗಿದ್ದು ವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ.

ವಾದಿಯ ಗಂಡ ತಿಬ್ಬೇಗೌಡ ರ ಸ್ವತ್ತಿಗೆ ನಿಮ್ಮ ತಾತ ಬಸವೇಗೌಡ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಕ್ಕುಬಂಧಿಯ ಲ್ಲಿ ಹೇಳಿರುವ ಹೆಂಚಿನ ಮನೆ 18*35 ಅಡಿ ಎಂದರೆ ಗೊತ್ತಿಲ್ಲ. ನೀವು ಮನೆಯಲ್ಲಿ ಸ್ವಾಧೀನದಲ್ಲಿ ಇಲ್ಲದೆ ಇರುವ ಕಾರಣ ನಿಮಗೆ ವಿಸ್ತೀರ್ಣ ಗೊತ್ತಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ವಾದಿಯ ಗಂಡ ಖರೀದಿ ಮಾಡಿದ್ದು , ಕಾನೂನು ಬದ್ದವಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅವರ ಶಾಂತಿಯುತ ಸ್ವಾಧೀನಕ್ಕೆ ನೀವು ಅಡ್ಡಿ ಪಡಿಸುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ಸದರಿ ಸ್ವತ್ತನ್ನು ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ಸ್ವತ್ತನ್ನು ಖರೀದಿ ಮಾಡುವ ವೇಳೆಯಲ್ಲಿ ಸದರಿ ಸ್ವತ್ತಿನ ದಕ್ಷಿಣಕ್ಕೆ ವಾದಿಯ ಸ್ವತ್ತು ಇದ್ದರೂ ಸಹ ನಿಡಿ-1 ರಲ್ಲಿ ಸರ್ಕಾರಿ ರಸ್ತೆ ಬರುತ್ತದೆ ಎಂದು ಸುಳ್ಳು ಚಕ್ಕುಬಂಧಿ ನೀಡಿ, ನೀವು ನ್ಯಾಯಾಲಯಕ್ಕೆ ಸುಳ್ಳು ಕ್ರಯ ಪತ್ರ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ನಿಡಿ-2 ಅನ್ನು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ದಕ್ಷಿಣಕ್ಕೆ ವಾದಿಗಳ ಪಿತ್ರಾರ್ಜಿತ ಸ್ವತ್ತು ಇದ್ದರು ಸಹ ನೀವು ರಸ್ತೆ ಎಂದು ಸುಳ್ಳು ಚಕ್ಕುಬಂಧಿ ಬರೆಸಿರುತ್ತೀರಿ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ವಿಸ್ತೀರ್ಣ ನಮೂದು ಮಾಡಿಲ್ಲ ಎಂದರೆ ಸರಿ . ನಿಡಿ-3 ಮತ್ತು 4 ರಲ್ಲಿ ವಾದಿಗಳ ಸ್ವತ್ತಿನ ಪಶ್ಚಿಮಕ್ಕೆ ಬರುವ ಸ್ವತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ